Crl.Misc. 94-2020
PW-1

(ಇಂದು ದಿನಾಂಕಃ 21–12–2024 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟಿ ಸ ವಾಲು ಃ ಶ್ರೀ ಆರ ಎಂ ಆರ್ ವಕೀಲರಿಂದ ಃ-

ಮಾನ್ಯ ಕೌಟುಂಬಿಕ ನ್ಯಾಯಾಲಯ ವಿಜಯಪೂರದಲ್ಲಿ ಆದ ಆದೇಶದ ನಂತರದಲ್ಲಿ 30 ದಿನಗಳೊಳಗೆ ನಾನು ಎದುರುಗಾರನ ಸಂಗಡ ಜೀವನ ಸಾಗಿಸಲು ಹೋಗಿರುವದಿಲ್ಲ ಅಂದರೆ ಸಾಕ್ಷಿಯು ಆತನು ನನಗೆ ಕರೆಯಲು ಬಂದಿರುವುದಿಲ್ಲವೆಂದು ನುಡಿಯುತ್ತಾರೆ. ಸದರ ಮಾನ್ಯ ನ್ಯಾಯಾಲಯದ ಆದೇಶದ ನಂತರ ಎದುರುಗಾರನು ನನ ಗೆ ವಕೀಲರ ಮೂಲಕ ನೋಟಿಸನ್ನು ನೀಡಿ ಆತನ ಸಂಗಡ ಜೀವನ ಸಾಗಿಸಲು ಬರಲು ಕೇಳಿ ಕಳಿಸಿದ್ದು ಅದನ್ನು ನಾನು ಸ್ವೀಕರಿಸಿ ಬರದೇ ಇರುತ್ತೇನೆ ಅಂದರೆ ಸಾಕ್ಷಿಯು ನೋಟಿಸನು ಸ್ವೀಕಾರ ಮಾಡಿರುತ್ತೇನೆ ಆದರೆ ಎದುರುಗಾರನು ಸ್ವತಃ ಕರೆಯಲು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಎದುರುಗಾರನು ಕರೆಯಲು ಬಂದಿರುವುದಿಲ್ಲ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮಾನ್ಯ ನ್ಯಾಯಾಲಯದ ಆದೇಶ ವಿದ್ದರು ಸಹ ಮತ್ತು ಎದುರುಗಾರನು ಕಾನೂನು ಪ್ರಕಾರ ನನಗೆ ನೋಟಿಸನ್ನು ನೀಡಿ ಕರೆದರು ಸಹ ನಾನು ಯಾವದನು ಲೆಕ್ಕಿಸದೇ ಆದೇಶವನ್ನು ತೀರಸ್ಕಾರ ಮಾಡಿ ಎದುರುಗಾರನ ಮನೆಗೆ ಬರದೇ ಆತನಿಗೆ ಮಾನಸಿಕ ಹಿಂಸೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ನನ್ನ ಈ ವರ್ತನೆಯಿಂದ ಎದುರುಗಾರನಿಗೆ ನಾನು ಆತನ ಸಂಗಡ ಉದ್ದೇಶ ಪೂರ್ವಕವಾಗಿ ಜೀವನ ಸಾಗಿಸಲು ತೀರಸ್ಕಾ ರ ಮಾಡಿದ್ದು ತಿಳಿದು ಬಂದಿದೆ ಅಂದರೆ ಸರಿಯಲ್ಲ. ನಾನು ಎದುರುಗಾರನ ಸಂಗಡ ಸ್ವ ಇಚ್ಛೆಯಿಂದ ಜೀವನ ಸಾಗಿತ್ತಿಲ್ಲ ಅಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಅದು ನನ್ನ ಸ್ವಇಚ್ಛೆ ಅಲ್ಲ ಆದರೆ ಅದು ಎದುರುಗಾರನ ವರ್ತನೆ ಇರುತ್ತದೆ ಎಂದು ನುಡಿಯುತ್ತಾರೆ.

ಎದುರುಗಾರನ ಸಂಗಡ ನಾನು ಜೀವನ ಸಾಗಿಸದೇ ಆತನ ಅರೋಗ್ಯದಲ್ಲಿ ಎರುಪೇರು ಆಗಿರುತ್ತದೆ ಅಂದರೆ ಸರಿಯಲ್ಲ ಸಾಕ್ಷಿಯ ಮುಂದುವರೆದು ಎರುಪೇರು ನನ್ನ ಆರೋಗ್ಯದಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಆರೋಗ್ಯ ಎರುಪೇರು ಆಗಿದ್ದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ.

ಈಗ ಸಾಕ್ಷಿಗೆ ನಿಪಿ 2 ರಿಂದ 7 ರ ದಾಖಲೆಗಳನ್ನು ತೋರಿಸ ಅದರಲ್ಲಿ ಎಲ್ಲಿಯು ಸಹ ಎದುರುಗಾರನ ಹೆಸರು ಇರುವುದಿಲ್ಲ ಅಂದರೆ ಸಾಕ್ಷಿಯು ಸರಿ ಅದು ಆತನ ತಂದೆಯ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 2 ರಿಂದಾ 7 ರಲ್ಲಿ ನಿರಾವರಿ ಜಮೀನು ಎಂದು

ನಮೂದು ಇರುವುದಿಲ್ಲ ಅಂದರೆ ಸಾಕ್ಷಿಯು ಅದು ನೀರಾವರಿ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಸಾಕ್ಷಿಗೆ ಈಗ ನಿಪಿ 2 ಮತ್ತು 6 ನ್ನು ತೋರಿಸಿ ಅದರಲ್ಲಿಯ ಕಾಲಂಃ 11 ರಲ್ಲಿ ಬ್ಯಾಂಕಿನ ಬೋಜ ಇರುತ್ತದೆ ಅಂದರೆ ಸಾಕ್ಷಿಯು ಸರಿ ಆದರೆ ಅದರ ಬಗ್ಗೆ ನನಗೆ ಮಾಹಿತಿ ಇರುವದಿಲ್ಲ. ನಿಪಿ2 ರಿಂದಾ 7 ರಲ್ಲಿರುವ ಜಮೀನುಗಳು ಒಣ ಬೇಸಾಯ ಜಮೀನುಗಳು ಅಂದ ರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಅದು ನೀರಾವರಿ ಜಮೀನು ಆಗಿದ್ದು, ಅಲ್ಲಿ ಕಬ್ಬು , ಮಾವು, ತೆಂಗು ಬೆಳೆಯುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ 2 ರಿಂದಾ 7 ನ್ನು ತೋರಿಸಿ ಅದರಲ್ಲಿ ಬೆಳೆಯ ಹೆಸರು ವಿಬಾಗದಲ್ಲಿ ಎನು ಇರುವುದಿಲ್ಲ ಅಂದರೆ ಸಾಕ್ಷಿಯು ಜಮೀನುಗಳಲ್ಲಿ ನಾನು ಹೇಳಿದ ಬೆಳೆಗಳನ್ನು ಬೆಳೆಯುತ್ತಾರೆ. ಸದರಿ ದಾಖಲೆಗಳಲ್ಲಿ ಎಲ್ಲಿಯು ಸಹ ನೀರಾವರಿ ಮೂಲ ನಮೂದು ಇರುವದಿಲ್ಲ ಅಂದರೆ ಸಾಕ್ಷಿಯು ಅಲ್ಲಿ ಬೋರವೆಲ್ಲ ಇದೆ ಎಂದು ನುಡಿಯುತ್ತಾರೆ. ಅದರ ಬಗ್ಗೆ ಯಾವದೇ ದಾಖಲೆ ಹಾಜರು ಪಡಿಸಿರುವುದಿಲ್ಲ. ಸದರಿ ಜಮೀನುಗಳು ಒಳ ಬೇಸಾಯದ ಜಮೀನುಗಳಾಗಿದ್ದು ಅದರಿಂದ ಹೆಚ್ಚು ಉತ್ಪನ ಹಾಗೂ ಆದಾಯ ಬರುವದಿಲ್ಲ ಎಂದರೆ ಸರಿಯಲ್ಲ.

ನನ್ನ ಮಾವನವರಿಗೆ ಅಂದಾಜು 70 ವರ್ಷ ವಯಸ್ಸು ಹಾಗೂ ಅತ್ತೆಯವರಿಗೆ 65 ವರ್ಷ ವಯಸ್ಸು. ನನ್ನ ಅತ್ತೆ , ವಾವನ ಜವಾಬ್ದಾರಿಯು ಎದುರುಗಾರನ ಮೇಲೆ ಇರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮತ್ತೆ ಇಬ್ಬರು ಮಕ್ಕಳು ಇರುತ್ತಾರೆ ಅವರು ಸಹ ನೋಡಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ಅವರಿಬ್ಬರಲ್ಲಿ ಒಬ್ಬಳ ವಿವಾಹ ಆಗಿ ಆಕೆಯ ಗಂಡನ ಮನೆಯಲ್ಲಿರುತ್ತಾರೆ ಅಂದರೆ ಸರಿಯಲ್ಲ. ನಾನು ಅಲ್ಲಿದ್ದಾಗ ನಮ್ಮ ಸಂಗಡ ಜೀವನ ಸಾಗಿಸುತ್ತಿದ್ದಳು ಮತ್ತು ಎದುರುಗಾರನ ಸಹೋದರನ ಮದುವೆ ಆಗಿರುತ್ತದೆ.

ಎದುರುಗಾರನು ಇವತ್ತಿಗೂ ನನನ್ನು ಈ ನ್ಯಾಯಾಲಯದಿಂದ ಕರೆದುಕೊಂಡು ಹೋಗಿ ಜೀವನ ಸಾಗಿಸಲು ಸಿದ್ದನಿರುತ್ತಾನೆ ಎಂದರೆ ಸಾಕ್ಷಿಯು ನನಗೆ ಆತನ ಮೇಲೆ ನಂಬಿಕೆ ಇರುವದಿಲ್ಲ ಮತ್ತು ಆತನು ಇಂದು ಬಂದು ಕರೆಯುತ್ತಿದ್ದಾನೆ ಇಷ್ಟು ವರ್ಷಗಳ ಕಾಲ ಕರೆದಿರುವದಿಲ್ಲ ಆದ ಕಾರಣ ನಾನು ಹೋಗುವುದಿಲ್ಲ ವೆಂದು ನುಡಿಯುತ್ತಾರೆ. ಎದುರುಗಾರನು ಕಾನೂನು ಕ್ರಮ ಕೈಗೊಂಡರು ಸಹ ನಾನು ಯಾವದನ್ನು ಲೆಕ್ಕಿಸದೇ ಸ್ವ ಇಚ್ಛೆಯಿಂದ ಆತನ ಸಂಗಡ ಜೀವನ ಸಾಗಿಲು ತೀರಸ್ಕಾರ ಮಾಡುತ್ತಾ ಬಂದಿರುತ್ತೇನೆ ಅಂದರೆ ಸರಿಯಲ್ಲ.

ನಾನು ಎದುರುಗಾರನ ಮೇಲೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಂಗತಿಗಳನ್ನು ತೋರಿಸಿ ಆತನಿಗೆ ಅವಮಾನ ಹಾಗೂ ಹಿಂಸೆ ನೀಡುವ ಉದ್ದೇಶದಿಂದ ಮತ್ತು ನಗೆ ಸಾಮರ್ಥ್ಯತೆ ಇದ್ದರು ಸಹ ಆತನಿಂದ ಜೀವನಾಂಶವನ್ನು ಪಡೆಯುವ ಉದ್ದೇಶದಿಂದ ಸದರಿ ಪ್ರಕರಣವನ್ನು

ದಾಖಲಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಜೀವನಾಂಶವನ್ನು ಪಡೆಯಲು ಅರ್ಹತೆ ಹೊಂದಿರುವುದಿಲ್ಲ ಅಂದರೆ ಸರಿಯಲ್ಲ. ಎದುರುಗಾರನು ಎಂದಿರೂ ನನ್ನ ಸಂಗಡ ವೈವಾಹಿಕ ಜೀವನ ಸಾಗಿಲು ಸಿದ್ದನಿಜರುತ್ತಾನೆ ನಾನು ಸ್ವತಃ ಸ್ವ ಇಚ್ಚೆಯಿಂದ ತೀರಸ್ಕಾರ ಮಾಡುತ್ತಾ ಬಂದಿರುತ್ತೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**